# ಗಾಯನದ ದೃಶ್ಯಕಾವ್ಯ!



ಪ್ರವೀಣ ಕುಲಕರ್ಣಿ

'ಸೀತಾ ಕಲ್ಯಾಣ ವೈಭೋಗಮೇ...', 'ಗೋವರ್ಧನ ಗಿರಿಧರ...', 'ಮಾಧವ ಮಾಮವ ದೇವ ಕೃಷ್ಣ...', 'ಹರಿವರಾಸರಂ...', 'ಪನಿಮುಥಿ ಮುಖಿ...', 'ಕೃಷ್ಣ ನೀ ಬೇಗನೆ ಬಾರೋ...' – ಇಹಂ ಕಾವ್ಯಂ ಯೂಟ್ಯೂಬ್ ಚಾನಲ್‌ನಲ್ಲಿ ನೀವು ಯಾವುದೇ ಹಾಡು ಕೇಳಿ, ಪರಂಪರೆಗೆ ಆಧುನಿಕತೆಯನ್ನು ಮುಖಾಮುಖಿಯಾಗಿಸಿ ತೆರೆದುಕೊಳ್ಳುವ ಫ್ಯೂಷನ್ ದೃಶ್ಯಕಾವ್ಯ ಕೇಳುಗರನ್ನು ರೋಮಾಂಚಿತರನ್ನಾಗಿ ಮಾಡುತ್ತದೆ. ಅದು ಗಾಯಕಿ ಕಾವ್ಯಾ ಅಜಿತ್ ಅವರಿಗೆ ಸಿದ್ಧಿಸಿರುವ ಶಕ್ತಿ. ಕರ್ನಾಟಕ ಸಂಗೀತವನ್ನು ಶಾಸ್ತ್ರಬದ್ಧವಾಗಿ ಕಲಿತಿರುವ ಅವರು, ಪಾಶ್ಚಿಮಾತ್ಯ ಸಂಗೀತ ಸಂಸ್ಕೃತಿಗೂ ತಮ್ಮನ್ನು ತಾವು ತೆರೆದುಕೊಂಡವರು. ಹೀಗಾಗಿ ಪೂರ್ವ–ಪಶ್ಚಿಮದ ಈ ಅಪೂರ್ವ ಸಂಗಮ ಹೊಸದೊಂದು ಸಂಗೀತದ ಹೊನಲಾಗಿ ಕೇಳುಗರ ಹೃದಯದಲ್ಲಿ ಮೈದುಂಬಿ ಹರಿಯುತ್ತದೆ.

ಕರ್ನಾಟಕ ಸಂಗೀತದ ಗಾಯಕಿ, ವಯೊಲಿನ್ ವಾದಕಿ, ಗೀತ ರಚನೆಕಾರ್ತಿ, ನೃತ್ಯಗಾರ್ತಿ, ನಟಿ ಹೀಗೆ ಬಹುಮುಖಿ ಪ್ರತಿಭೆಯಾಗಿರುವ ಕಾವ್ಯಾ ಅವರು 'ದೇವರ ಸ್ವಂತ ನಾಡು' ಎಂಬ ಹೆಗ್ಗಳಿಕೆಯ ಕೇರಳದವರು. ಅಲ್ಲಿನ ಕೋಯಿಕ್ಕೋಡ್ ಮೂಲದವರು. ಜಗತ್ತಿನ ಹಲವು ದೇಶಗಳಲ್ಲಿ ಸಂಗೀತ ಕಛೇರಿಗಳನ್ನು ನೀಡಿ, ಶ್ರೋತೃಗಳ ಮನಸೂರೆಗೊಂಡವರು. ಅವರ ಅಪ್ಪ ಡಾ. ಅಜಿತ್ ಭಾಸ್ಕರ್, ಅಮ್ಮ ಡಾ. ಲಕ್ಷ್ಮಿ ಎಸ್. ಇಬ್ಬರೂ ಕೇರಳದಲ್ಲಿ ಪ್ರಸಿದ್ಧ ವೈದ್ಯರು. ವೈದ್ಯ ದಂಪತಿಯ ಮಗಳಿಗೆ ಸಂಗೀತ ಒಲಿದಿದ್ದು ಹೇಗೆ ಎಂಬ ಪ್ರಶ್ನೆ ಕಾಡುತ್ತಿದೆಯೇ? ಕಾವ್ಯಾ ಅವರ ಅಜ್ಜಿ ಕಮಲಾ ಸುಬ್ರಮಣಿಯನ್ ಕರ್ನಾಟಕ ಸಂಗೀತದ ಹೆಸರಾಂತ ಗಾಯಕಿ. ಅವರು ಆಕಾಶವಾಣಿ ಕಲಾವಿದೆ ಕೂಡ ಆಗಿದ್ದವರು. ಕಮಲಾ ಅವರೇ ಕಾವ್ಯಾ ಅವರ ಸಂಗೀತದ ಮೊದಲ ಗುರು. ಮುಂದೆ ಗೀತಾ ದೇವಿ ವಾಸುದೇವನ್ ಮತ್ತು ಮದುರೈ ರಾಜಾರಾಮ್ ಅವರಂತಹ ಘಟಾನುಘಟಿಗಳ ಬಳಿಯಲ್ಲಿ ಕರ್ನಾಟಕ ಸಂಗೀತ ಕಲಿಯುವ ಅವಕಾಶ ಅವರಿಗೆ ಒದಗಿತು. ಅಲ್ಬರ್ಟ್ ವಿಜಯನ್ ಜಾಫೇಟ್ ಅವರಿಂದ ವಯೊಲಿನ್ ದೀಕ್ಷೆಯನ್ನೂ ಅವರು ಪಡೆದರು. ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂಜಿನಿಯರಿಂಗ್ ಪದವೀಧರೆಯಾಗಿರುವ ಅವರು, ಕೆಲಕಾಲ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡಿ, ಬಳಿಕ ಸಂಗೀತಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಂಡವರು. ಸಂಗೀತದಲ್ಲಿ ಲೆಕ್ಕವಿಲ್ಲದಷ್ಟು ಪ್ರಯೋಗ ಮಾಡಿದವರು.

'ಸೀತಾ ಕಲ್ಯಾಣ ವೈಭೋಗಮೇ...' ಗೀತೆ ತ್ಯಾಗರಾಜರ ಒಂದು ಕೃತಿ. 'ಪವನಜಸ್ತುತಿಪಾತ್ರ/ ಪಾವನಚರಿತ್ರ/ ರವಿಸೋಮವರನೇತ್ರ/ರಮಣೀಯ ಗಾತ್ರ' ಎಂಬ ಸಾಲುಗಳು ಕಿವಿಯ ಮೇಲೆ ಬೀಳುತ್ತಾ ಹೋದಂತೆ ತೆರೆಯ ಮೇಲೆ ಒಂದು ಅಮೋಘವಾದ ದೃಶ್ಯಕಾವ್ಯವೇ ತೆರೆದುಕೊಳ್ಳುತ್ತಾ ಹೋಗುತ್ತದೆ. ಅದು ಆಧುನಿಕ ಸೀತೆಯ ಮಾಂಗಲ್ಯಧಾರಣೆಯ ಹೊತ್ತು. ಮದುವೆಯೆಂಬ ಬಂಧನ ತನ್ನ ನವ್ಯ ಸಂಗೀತ ಯಾತ್ರೆಗೆ ಎಲ್ಲಿ ಮುಳ್ಳಾಗುವುದೋ ಎಂಬ ಕಸಿವಿಸಿಯಲ್ಲಿ ಸೀತೆ ಮದುವೆಯನ್ನು ಧಿಕ್ಕರಿಸಿಬಿಡಲೇ ಎಂದು ಯೋಚಿಸಿದಂತಹ ಹೊತ್ತು ಕೂಡ ಅದಾಗಿತ್ತು. ಇದನ್ನೆಲ್ಲ ಅರಿತವನಂತೆ ಮಾಲೆ ಹಾಕಲು ಸಿದ್ಧವಾಗಿ ಕುಳಿತ 'ರಾಮ' ನಿನ್ನ ಇಚ್ಛೆಯಂತೆ ನಡೆದುಕೊಳ್ಳಲು ನಾನು ಅಡ್ಡಿಯಾಗುವುದಿಲ್ಲ ಎಂದು ಸೀತೆಯ ಕೈಯನ್ನು ಅದುಮಿ ಭರವಸೆ ಕೊಡುವನು. 'ಪರಮೇಶನುತ ಗೀತ/ಭವಜಲಧಿಪೋತ/ ತರಣಿಕುಲಸಂಜಾತ/ ತ್ಯಾಗರಾಜನುತ' ಎಂದು ಕಾವ್ಯವು ಮುಕ್ತಾಯದ ಘಟ್ಟ ತಲುಪುತ್ತಿದ್ದಂತೆ ಸೀತೆಯ ಮುಖ ಮತ್ತೆ ಅರಳುವುದು. ಗಟ್ಟಿಮೇಳ ಮೊಳಗಿ, ಹರ್ಷದ ಹೊನಲು ಹರಿಯುವುದು. ಹೀಗೆ ಕಾವ್ಯಾ ಅವರು ಆಧುನಿಕ ಸೀತೆಯನ್ನು ನೋಡಿದ ನೋಟವೇ ವಿಶಿಷ್ಟವಾಗಿದೆ.

ತಮಿಳು, ಮಲೆಯಾಳ, ತೆಲುಗು ಮತ್ತು ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ಹಾಡುಗಳನ್ನು ಹಾಡಿರುವ ಕಾವ್ಯಾ ಅವರ ದೃಶ್ಯರೂಪಕಗಳು ಒಂದಕ್ಕಿಂತ ಒಂದು ಭಿನ್ನ. ನೂರಾರು ವರ್ಷಗಳಷ್ಟು ಹಿಂದೆ ರಚನೆಯಾದ ಹಾಡುಗಳಿಗೆ ಹೊಸ ಅರ್ಥವನ್ನು ಸ್ಫುರಿಸುವಲ್ಲಿ ಯಶಸ್ಸು ಸಾಧಿಸಿವೆ. ದಕ್ಷಿಣದ ಎಲ್ಲ ಭಾಷೆಗಳ ಸಿನಿಮಾಗಳಲ್ಲೂ ಅವರು ಹಾಡಿದ್ದಾರೆ. ಕನ್ನಡದ 'ನಮ್ ದುನಿಯಾ ನಮ್ ಸ್ಟೈಲ್' ಸಿನಿಮಾದಲ್ಲಿ ಅವರು ಹಾಡಿದ ಹಾಡುಗಳಿವೆ. ಹಲವು ಆಲ್ಬಂಗಳನ್ನೂ ಅವರು ಹೊರತಂದಿದ್ದಾರೆ. ಪುಟ್ಟ ಮಗಳ ಜತೆ ಅವರು ಕಾಣಿಸಿಕೊಳ್ಳುತ್ತಿರುವ ಆಲ್ಬಂಗಳು ಸಂಗೀತಪ್ರಿಯರಿಗೆ ಮುದ ನೀಡುತ್ತವೆ. ಕಾವ್ಯಾ ಅವರ ಅಜ್ಜಿ, ಅಮ್ಮ, ಕಾವ್ಯಾ ಹಾಗೂ ಅವರ ಮಗಳು ಹೀಗೆ ನಾಲ್ಕು ತಲೆಮಾರಿನವರು ಸೇರಿ ಕಾಣಿಸಿಕೊಂಡಿರುವ, ನೀಲಾಂಬರಿ ರಾಗದಲ್ಲಿರುವ ಅವರ ಹಾಡು 'ಮಾಧವ ಮಾಮವ ದೇವ ಕೃಷ್ಣ...' ಲಕ್ಷ, ಲಕ್ಷ ಸಂಖ್ಯೆಯಲ್ಲಿ ಶೇರ್ ಆಗಿದೆ. ಕಾವ್ಯಾ ಅವರ ಅಮ್ಮ ಡಾ. ಲಕ್ಷ್ಮಿ ಅವರು ಈ ರೂಪಕದಲ್ಲಿ ಗೆಜ್ಜೆ ಕಟ್ಟಿ ನರ್ತಿಸಿದ್ದಾರೆ. 'ಮುಂದೊಂದು ದಿನ ನನ್ನ ಮಗಳು ಸಂಗೀತ ಕಲಿತಾಗ ನಾಲ್ಕೂ ತಲೆಮಾರಿನವರು ಒಟ್ಟಾಗಿ ಹಾಡುವುದನ್ನೂ ನೀವು ಕೇಳಬಹುದು' ಎಂದು ಅವರು ಖುಷಿಯಿಂದ ಹೇಳುತ್ತಾರೆ.

ಇಂಗ್ಲಿಷ್, ಅರೇಬಿಕ್ ಭಾಷೆಗಳಲ್ಲೂ ತಮ್ಮ ಇಂಪಾದ ಧ್ವನಿಯನ್ನು ಪರೀಕ್ಷೆಗೆ ಒಡ್ಡಿರುವ ಅವರು ಇತ್ತೀಚೆಗೆ ಸ್ಪ್ಯಾನಿಷ್ ಭಾಷೆಯಲ್ಲೂ ಹಾಡಿದ್ದಾರೆ. ಅವರ ಆಲ್ಬಂಗಳು ಒಂದಕ್ಕಿಂತ ಒಂದು ಅದ್ಭುತವಾಗಿದ್ದು, ಕೇಳುಗರಲ್ಲಿ, ನೋಡುಗರಲ್ಲಿ ಹೊಸ ಅರ್ಥವನ್ನು, ನವೋಲ್ಲಾಸವನ್ನು ತುಂಬುತ್ತವೆ. ಅವರ ಹಾಡುಗಳಲ್ಲಿ ಸಮಾನತೆಯ ಸಂದೇಶವಿದೆ. ಲಿಂಗತ್ವ ಅಲ್ಪಸಂಖ್ಯಾತರ ಭಾವನೆಗಳಿಗೂ ಕಿವಿಯಾಗಬೇಕೆಂಬ ಸಲಹೆಯಿದೆ. ಪರಿಸರದ ಮೇಲೆ ಪ್ರೀತಿಯಿದೆ. ಪರಂಪರೆಯ ಮೇಲೆ ಅಭಿಮಾನವಿದೆ. ಅವರ ಗಾಯನದಲ್ಲಿ ಮಣ್ಣಿನ ಘಮಲಿದೆ. ಗಗನದೆತ್ತರಕ್ಕೆ ಚಿಮ್ಮುವಂತಹ ಉತ್ಸಾಹವೂ ಇದೆ. ಅಲ್ಲವೆ ಮತ್ತೆ, ಅವರ ಹೆಸರೇ ಕಾವ್ಯಾ!

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65